## ನಮ್ಮ ವಸತಿ ಶಾಲೆಯ ಸಂಕ್ಷಿಪ್ತ ಪರಿಚಯ...

**ಕರ್ನಾಟಕ ಸರ್ಕಾರ**

**ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ**

**ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ವಸತಿ ಶಾಲೆ, ಜಗಳೂರು.**

**ಜಗಳೂರು ತಾ॥ ದಾವಣಗೆರೆ ಜಿ॥ – 577528.**

| | | |
|---|---|---|
| ಮಂಜೂರಾದ ವರ್ಷ | : | 2019 (01-09-2019) |
| ಶೈಕ್ಷಣಿಕ ಪ್ರಾರಂಭವಾದ ವರ್ಷ | : | 2019-20 |
| ಕಟ್ಟಡದ ಸ್ವರೂಪ | : | ಬಾಡಿಗೆ |
| ಆಕ್ಷಾಂಶ–ರೇಖಾಂಶ | : | $14.52^{0}$ - $75.34^{0}$ |
| ನಿವೇಶನದ ವಿಸ್ತೀರ್ಣತೆ | : | 9.36 ಎಕರೆ |
| ಪ್ರವೇಶ ಮಂಜೂರಾತಿ ಸಂಖ್ಯೆ | : | 250 |

****

## ನಮ್ಮ ಶಾಲೆಯ ವಿಹಂಗಮ ನೋಟ....



# : ವಿವರಣೆ :

ಕರ್ನಾಟಕ ರಾಜ್ಯದ ಮ್ಯಾಂಚೆಸ್ಟರ್ ಎಂದೇ ಪ್ರಖ್ಯಾತಿ ಪಡೆದ ದಾವಣಗೆರೆ ಜಿಲ್ಲೆಯ ಜಗಳೂರು ಪಟ್ಟಣದಲ್ಲಿ ನಿರ್ಮಿಸಿರುವ ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯದಲ್ಲಿ ನಮ್ಮ ಶಾಲೆಯು ನಿರ್ಮಾಣಗೊಂಡಿದೆ, ಚಿಕ್ಕದಾದ ಬೆಟ್ಟ ಗುಡ್ಡಗಳಿಂದ ಸುತ್ತುವರೆದ ನೈಸರ್ಗಿಕ ಸೌಂದರ್ಯದ ಮಡಿಲಲ್ಲಿ ಶಾಲೆಯು ದಿನಾಂಕ: 01–09–2019 ರಂದು ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 37 ಎಂಡಿಎಸ್2019ರ ಪ್ರಕಾರ ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ಏಳಿಗೆಯ ಧ್ಯೇಯೋದ್ದೇಶಗಳ ಸಾಧನೆಗಾಗಿ ಶಾಲೆಯನ್ನು ಜಗಳೂರು ಪಟ್ಟಣದಲ್ಲಿ ಪ್ರಾರಂಭಿಸಲಾಯಿತು. ಈ ವಸತಿ ಶಾಲೆಯಲ್ಲಿ ಪ್ರಸ್ತುತ 6ನೇ ಮತ್ತು 7ನೇ ತರಗತಿಗಳು ಆಂಗ್ಲ ಮಾಧ್ಯಮದಲ್ಲಿ ನೆಡೆಯುತ್ತಿದ್ದು, 64 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ದೇಶದ ಭವಿಷ್ಯ
ಲೋಕಸಭೆಯಲ್ಲಾಗಲಿ
ವಿಧಾನಸಭೆಯಲ್ಲಾಗಲಿ
ಪೋಲೀಸ್ ಸ್ಟೇಷನ್‌ಗಳಲ್ಲಾಗಲಿ
ಘನ ನ್ಯಾಯಾಲಯಗಳಲ್ಲಾಗಲಿ
ಬಹುಹಂತದ ಕಟ್ಟಡಗಳಲ್ಲಾಗಲಿ ನಿರ್ಮಾಣವಾಗುವುದಿಲ್ಲ
"ಶಾಲಾ ಕೊಠಡಿಗಳಲ್ಲಿ ಮಾತ್ರ ನಿರ್ಮಾಣವಾಗುವುದು"

ಈ ಹಿನ್ನೆಲೆಯಲ್ಲಿ ಮಕ್ಕಳ ಗುಣಮಟ್ಟದ ಶಿಕ್ಷಣಕ್ಕೆ ಪೂರಕವಾಗುವಂತಹ ಪ್ರತ್ಯೇಕವಾದ ಪ್ರತ್ಯೇಕವಾದ ಕಂಪ್ಯೂಟರ್ ತರಗತಿಗಳ ವ್ಯವಸ್ಥೆಮಾಡಲಾಗಿದೆ ಹಾಗೆಯೇ ವಸತಿ ಶಾಲೆಯು ಉತ್ತಮ ಗ್ರಂಥಾಲಯ, ಪ್ರಯೋಗಾಲಯ, ಆಟದ ಮೈದಾನ, ಶಾಲಾ ಕೈ ತೋಟ, ಹೀಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿದೆ. ವಸತಿ ಶಾಲೆಯು ನುರಿತ ಶಿಕ್ಷಕರನ್ನು ಹೊಂದಿದ್ದು, ಪಠ್ಯ ವಿಷಯಗಳ ಜೊತೆ ಪಠ್ಯೇತರ ವಿಷಯಗಳಲ್ಲೂ ವಿದ್ಯಾರ್ಥಿಗಳು ತೊಡಗಿಸಿಕೊಳ್ಳುವಂತೆ ಮಾಡುವ ಮೂಲಕ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದೆ.